**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಡಬ್ಲೂ-1 / ಪಿ.ಡಬ್ಲೂ-1**

**ಸಿ.ಸಿ.ನಂ. 651/2019**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹದೇವಮ್ಮ |
| ಗಂಡನ ಹೆಸರು | : | ಸಿದ್ದರಾಜು |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ನಂಜನಗೂಡು ಟೌನ್. |

**ಸಾಕ್ಷಿಯನ್ನು ದಿನಾಂಕಃ 17.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಗಳು ನಮ್ಮ ಗ್ರಾಮದ ನಿವಾಸಿಗಳಾಗಿರುತ್ತಾರೆ. ಚಾಸಾ-2 ನನ್ನ ಗಂಡ. ಚಾಸಾ-3 ನನ್ನ ಮಗಳು. ನಮ್ಮ ಮನೆಯಲ್ಲಿ ಪೂಜೆ ಮಾಡುವ ವಿಚಾರದಲ್ಲಿ ನಮಗು ಮತ್ತು ಆರೋಪಿಗಳಿಗು ಬಾಯಿಮಾತಿನ ಚರ್ಚೆಯಾಗಿದ್ದು, ಇಷ್ಟಕ್ಕೆ ನಾನು ಹೆದರಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಎರಡು ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಗಳು ದೂರು ಮತ್ತು ಅಮಾನತ್ ಮಹಜರ್ ಗಳಾಗಿದ್ದು, ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ದೂರನ್ನು **ನಿ.ಪಿ-1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ-1(ಎ)** ಎಂದು, ಅಮಾನತ್ ಮಹಜರ್ ನ್ನು **ನಿ.ಪಿ-2** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.**ಪಿ-2(ಎ)** ಎಂದು ಗುರುತಿಸಲಾಯಿತು. ನಿ.ಪಿ-1 ಮತ್ತು 2 ರಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಏನನ್ನೂ ವಶಪಡಿಸಿಕೊಂಡಿಲ್ಲ. ಆರೋಪಿಗಳು ಅಕ್ರಮ ಕೂಟ ಸೇರಿ ನಮ್ಮ ಮನೆಗೆ ಅಕ್ರಮ ಪ್ರವೇಶ ಮಾಡಿಲ್ಲ, ಯಾರನ್ನು

ಗೃಹಬಂಧನದಲ್ಲಿ ಇರಿಸಿರುವುದಿಲ್ಲ, ನನಗೆ ಮತ್ತು ಚಾಸಾ-2 ರಿಂದ 4 ರವರಿಗೆ ಯಾವುದೇ ಹಲ್ಲೆ ಮಾಡಿಲ್ಲ, ಚಾಸಾ-3 ರವರನ್ನು ಎಳೆದಾಡಿ ಯಾವುದೇ ಮಾನಭಂಗ ಮಾಡಲು ಪ್ರಯತ್ನಿಸಿಲ್ಲ ಮತ್ತು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಸ.ಸ.ಅ ರವರಿಂದಃ**

ದಿನಾಂಕ 01.01.2018 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಇಮ್ಮಾವುಹುಂಡಿ ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿ ಚಾಸಾ-4 ರವರಿಂದ ಪೂಜೆ ಮಾಡಿಸುತ್ತಿದ್ದಾಗ ಆರೋಪಿಗಳು ಅಕ್ರಮ ಕೂಟ ಸೇರಿ ನಮ್ಮ ಮನೆಗೆ ಗೃಹಾತಿಕ್ರಮಣ ಮಾಡಿ ಚಾಸಾ-4 ರವರನ್ನು ಬೋಳಿಮಗನೆ, ಸೂಳೆಮಗನೆ ನೀನು ಯಾವ ಪೂಜೆ ಮಾಡುವುದು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. 2, 12 ಮತ್ತು 13 ನೇ ಆರೋಪಿಗಳು ದೊಣ್ಣೆಯಿಂದ ಚಾಸಾ-4 ರವರಿಗೆ ಹಲ್ಲೆ ಮಾಡಿದ್ದಲ್ಲದೆ ಬಿಡಿಸಲು ಹೋದ ನನ್ನನ್ನು 19, 20 ಮತ್ತು 21 ನೇ ಆರೋಪಿಗಳು ನನ್ನನ್ನು ಹಿಡಿದು ಎಳೆದಾಡಿ ನನ್ನ ರವಿಕೆ ಹರಿದುಹಾಕಿ ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. 2, 14 ಮತ್ತು 16 ನೇ ಆರೋಪಿಗಳು ಚಾಸಾ-3 ರವರನ್ನು ಕೂಡ ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. 1, 4, 6, 7, 9, 10, 15, 17 ಮತ್ತು 18 ನೇ ಆರೋಪಿಗಳು ಚಾಸಾ-2 ರವರನ್ನು ತಬ್ಬಿಡಿದುಕೊಂಡು ಮನೆಯಲ್ಲಿ ಕೂಡಿಹಾಕಿ ಬೀಗ ಹಾಕಿ ಚಾಸಾ-4 ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ಎಂದರೆ

ಸರಿಯಲ್ಲ. ನಾನು ಈ ವಿಚಾರವಾಗಿ ನಿ.ಪಿ–1ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ದೂರು ಕೊಟ್ಟ ಮೇರೆಗೆ ದಿನಾಂಕ 06.01.2018 ರಂದು ಪೊಲೀಸರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನಾನು ಹಾಜರುಪಡಿಸಿದ ಸೀರೆ ಮತ್ತು ನೈಟಿಯನ್ನು ವಶಪಡಿಸಿಕೊಂಡು ನಿಪಿ–2 ರಂತೆ ಮಹಜರ್ ಮಾಡಿರುತ್ತಾರೆಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಸದರಿ ಮರು ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಹಿಯಿಂದ ಗುರುತಿಸಲಾದ ಸದರಿ ಮರು ಹೇಳಿಕೆಯ ಭಾಗವನ್ನು **ನಿ.ಪಿ–3** ಎಂದು ಗುರುತಿಸಲಾಯಿತು. ಆರೋಪಿಗಳು ಹಾಗು ನಾನು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ** ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ನಂಜನಗೂಡು.**